ಮನೆಯ ಅಡಿಗೆಯವಳು ನನ್ನ ರೂಮಿನ ಬಾಗಿಲನ್ನು ಬಡಿದು ಅಂದಳು: 'ನೀನು ಅಪ್ಪನ ರೂಮಿಗೆ ಹೋಗಬೇಕಂತೆ.' ನಾನು ಅಪ್ಪನ ಓದುವ ರೂಮಿಗೆ ಹೋದೆ. ಅವನು ಆರಾಮ ಕುರ್ಚಿಯಲ್ಲಿ ಡೆಸ್ಕಿನತ್ತ ಮುಖ ಮಾಡಿ ಕೂತಿದ್ದ. ತಿರುಗದೆ ಹಾಗೆಯೇ ಕೂತು ಮಾತನಾಡಲು ಶುರು ಮಾಡಿದ: 'ನಾಳೆ ಬೆಳಗ್ಗೆ ನೀನು ನನ್ನ ಸಾಮಾರಾ ಎಸ್ಟೇಟ್‌ಗೆ ಹೋಗ್ತೀಯ ಹಾಗೂ ಉಳಿದ ಬೇಸಿಗೆಯನ್ನು ಅಲ್ಲಿಯೇ ಕಳೆಯುತ್ತೀಯಾ. ಶರತ್ಕಾಲಕ್ಕೆ ನೀನು ಮಾಸ್ಕೊ ಅಥವಾ ಪೀಟರ್ಸ್‌ಬರ್ಗ್‌ಗೆ ಹೋಗ್ತೀಯ, ಅಲ್ಲಿ ಒಂದು ಕೆಲಸ ಹುಡುಕಿಕೊಳ್ತೀಯ. ನೀನು ನನ್ನ ಮಾತುಗಳನ್ನು ಮೀರಿದ್ದೇ ಆದಲ್ಲಿ, ನಿನಗೆ ನನ್ನ ಆಸ್ತಿಯಲ್ಲಿ ಒಂದಿಂಚೂ ಕೂಡಾ ಸಿಗಲ್ಲ. ಆದರೆ, ಆಗ ಅದು ಅಷ್ಟಕ್ಕೆ ಮುಗಿಯೊಲ್ಲ. ಕೂಡಲೇ ನಿನ್ನನ್ನ ದೇಶದಿಂದ ಗಡಿಪಾರು ಮಾಡುವಂತೆ ನಾಳೆ ಬೆಳಗ್ಗೆಯೇ ಗೌವರ್ನರ್‌ಗೆ ಹೇಳ್ತೀನಿ. ಈಗಿಂದೀಗಲೇ ನೀನು ಹೊರಡು, ನಿನ್ನ ಮುಖವನ್ನು ನನಗೆ ಮತ್ತೆ ತೋರಿಸಬೇಡ. ನಿನ್ನ ಟ್ರೈನಿನ ಚಾರ್ಜು ಮತ್ತು ಖರ್ಚಿಗೆಂದು ಒಂದಷ್ಟು ಹಣವನ್ನು ನಾಳೆ ಬೆಳಗ್ಗೆ ನನ್ನವನೊಬ್ಬ ನಿನಗೆ ತಲುಪಿಸುತ್ತಾನೆ. ಜೊತೆಗೆ, ಕೆಲವು ದಿನಗಳು ಕಳೆದ ಮೇಲೆ, ನಗರದಲ್ಲಿ ನಿನ್ನ ಮೊದಲ ದಿನಗಳ ಖರ್ಚಿಗಾಗಿ ಮತ್ತೊಂದಷ್ಟು ಹಣವನ್ನು ಕೊಡುವಂತೆ ಎಸ್ಟೇಟಿನ ಕಚೇರಿಗೆ ಪತ್ರ ಬರೆಯುತ್ತೇನೆ. ನೀನಿಲ್ಲಿಂದ ಹೊರಡುವ ಮೊದಲು ಅವಳನ್ನು ನೋಡುವ ಯಾವ ಆಸೆಯನ್ನೂ ಇಟ್ಟುಕೋಬೇಡ. ಸರಿ, ನೀನಿನ್ನು ಹೊರಡು.'

ಆ ರಾತ್ರಿಯೇ ನಾನು ಯರೋಸ್ಲಾವಲ್ ಪ್ರಾಂತ್ಯಕ್ಕೆ ಹೊರಟೆ. ಹಾಗೂ ಉಳಿದ ಬೇಸಿಗೆಯನ್ನೆಲ್ಲಾ ನನ್ನ ಸ್ಕೂಲಿನ ಗೆಳೆಯನೊಬ್ಬನ ಜೊತೆಯಲ್ಲಿ ಅಲ್ಲೇ ಕಳೆದೆ. ಅವನ ಅಪ್ಪನ ಸಹಾಯದಿಂದ ಶರತ್ಕಾಲದ ಹೊತ್ತಿಗೆ ವಿದೇಶಾಂಗ ವ್ಯವಹಾರಗಳ ಮಂತ್ರಿಯ ಕಚೇರಿಯಲ್ಲಿ ಕೆಲಸವೊಂದನ್ನು ಗಿಟ್ಟಿಸಿಕೊಂಡೆ. ಅನಂತರ, ನಾನು ನನ್ನ ಆಸ್ತಿಯ ಉತ್ತರಾಧಿಕಾರತ್ವದ ಮೇಲಿನ ಹಕ್ಕುಗಳನ್ನು ಮಾತ್ರ ತ್ಯಜಿಸುತ್ತಿಲ್ಲ, ಜೊತೆಗೆ ನಿನ್ನಿಂದ ಯಾವುದೇ ಬಗೆಯ ಸಹಾಯವನ್ನೂ ತಿರಸ್ಕರಿಸುತ್ತಿದ್ದೇನೆ—ಅಂತ ಅಪ್ಪನಿಗೊಂದು ಪತ್ರ ಬರೆದೆ. ಅದೇ ಶರತ್ಕಾಲದಲ್ಲಿ ಅವನು ಸೇವೆಯಿಂದ ನಿವೃತ್ತಿ ಹೊಂದಿದನೆಂದೂ, 'ಮೋಹಕ, ಎಳೆಯ ಹೆಂಡತಿಯೊಂದಿಗೆ' ಪೀಟರ್ಸ್‌ಬರ್ಗ್‌ಗೆ ಬಂದು ನೆಲೆಸಿರುವನೆಂದು ತಿಳಿಯಿತು.

ಒಂದು ರಾತ್ರಿ, ನಾನು ಮಾರೀನ್‌ಸ್ಕೀ ರಂಗ ಮಂದಿರದ ಗುಡಾರದಂಗಡಿಗಳಲ್ಲಿ ತಿರುಗಾಡುತ್ತಿದ್ದಾಗ ನಾಟಕ ಶುರುವಾಗಲು ಇನ್ನೇನು ಕೆಲವೇ ನಿಮಿಷಗಳಿವೆ ಅನ್ನುವಾಗ, ಅವರನ್ನು ನೋಡಿದೆ. ರಂಗಸ್ಥಳಕ್ಕೆ ತುಂಬಾ ಹತ್ತಿರವಿದ್ದ ಪ್ರತ್ಯೇಕ ಬಾಕ್ಸ್‌ನ ಮುಂದಿನ ಸೀಟುಗಳಲ್ಲಿ ಅವರಿಬ್ಬರೂ ಕೂತಿದ್ದರು. ಅವಳ ಹೊಳೆಯುವ ಅಪೇರಾ ದುರ್ಬೀನು ಅವಳೆದುರಿನ ಕಟಕಟೆಯ ಮೇಲಿತ್ತು. ಅಪ್ಪ ತನ್ನ ಸಂಜೆ ಕೋಟಿನಲ್ಲಿ ಕೆಂಬೂತದ ಥರ ಕಾಣುತ್ತಿದ್ದ. ಅವನು ಗೂನಿಕೊಂಡು, ಒಂದು ಕಣ್ಣನ್ನು ವಾಲಿಸಿಕೊಂಡು, ಕಾರ್ಯಕ್ರಮ ಪಟ್ಟಿಯನ್ನು ಓದುವುದರಲ್ಲಿ ತಲ್ಲೀನನಾಗಿದ್ದ. ಅವಳು ಸಮಚಿತ್ತದಿಂದ ಆಕರ್ಷಕವಾಗಿ ಕಾಣುತ್ತಿದ್ದಳು. ಅವಳ ಕಪ್ಪು ಕೂದಲು ತಲೆಯಲ್ಲಿ ಚಂದದ ತುರುಬಾಗಿತ್ತು. ಬೆಚ್ಚಗಿನ ಬೆಳಕು ಫಳಾರಿಸುತ್ತಿದ್ದ, ಮೆಲ್ಲನೆಯ ಪಿಸು ಮಾತುಗಳು ಹರಿದಾಡುತ್ತಿದ್ದ, ಸಂಜೆಯ ಕೋಟು, ನಿಲುವಂಗಿ ಮತ್ತು ಸಮವಸ್ತ್ರಗಳಲ್ಲಿ ಬಾಕ್ಸ್‌ನಲ್ಲಿದ್ದ ಜನರ ನಡುವೆ ಅವಳು ಅತಿ ಉತ್ಸಾಹಿಯಾಗಿ ಕಾಣುತ್ತಿದ್ದಳು. ಕಡುಗೆಂಪುಕಲ್ಲಿನ ಪುಟ್ಟ ಶಿಲುಬೆ ಅವಳ ಎದೆಯ ಮೇಲೆ ಅಸ್ಪುಟವಾಗಿ ಮಿನುಗುತ್ತಿತ್ತು. ಅವಳ ತೆಳ್ಳಗಿದ್ದ, ಆದರೆ ಆಗಲೇ ತುಂಬಿಕೊಂಡಿದ್ದ ಕೈಗಳು ಬೋಳಾಗಿದ್ದವು. ರಕ್ತವರ್ಣದ ಮುಖಮಲ್ ಬಟ್ಟೆಯ ಅವಳ ಹೊರ ಉಡುಪನ್ನು ಎಡ ಭುಜದ ಮೇಲೆ ಕೆಂಪುಕಲ್ಲಿನ ಕುಣಿಕೆ ಕೊಂಡಿಯೊಂದು ಹಿಡಿದಿಟ್ಟಿತ್ತು.

**ಕೆಂಬೂತ: ಒಂದು ಬಗೆಯ ಕಾಗೆ; ಸಂಬಾರಕಾಗೆ**

**(ಮೇ 18, 1944)**